ಪ್ರಕಟಣೆ

ಕರ್ನಾಟಕ ರಾಜ್ಯ ಮುಕ್ತವಿಶ್ವವಿದ್ಯಾನಿಲಯ ಸೆನೆಟ್ಪಿಗೆ ಇಬ್ಬರು ಸದಸ್ಯರನ್ನು ಚುನಾಯಿಸುವ ಸಲುವಾಗಿ ಚುನಾವಣಾ ಕಾರ್ಯಕ್ರಮ ಪಟ್ಟಿಯನ್ನು ಹೊರಡಿಸಲಾಗಿ ಎರಡು ಸ್ಥಾನಗಳಿಗೆ ಸಮನಾಗಿ ನಾಮಪತ್ರಗಳು ಸ್ವೀಕೃತವಾಗಿರುವ ಮೇರೆಗೆ ಮಾನ್ಯ ಸದಸ್ಯರುಗಳಾದ ಶ್ರೀ ಜಿ. ರಾಜುಗೌಡ ಮತ್ತು ಶ್ರೀ ಜಿ.ಎನ್. ನಂಜುಂಡಸ್ವಾಮಿ ಅವರುಗಳು ಸದರಿ ವಿಶ್ವವಿದ್ಯಾನಿಲಯದ ಸೆನೆಟ್ಪಿಗೆ ಅವಿರೋಧವಾಗಿ ಆಯ್ಕೆಯಾಗಿರುತ್ತಾರೆಂದು ಈ ಮೂಲಕ ತಿಳಿಯಪಡಿಸುತ್ತೇನೆ.

ಪ್ರಶ್ನೋತ್ತರಗಳು

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಿದ ಉತ್ತರಗಳು

ಚಿಂತಾಮಣಿ ಗ್ರಂಥಾಲಯ ಬಗ್ಗೆ

526 - ಶ್ರೀ ಚೌಡರೆಡ್ಡಿ (ಚಿಂತಾಮಣಿ) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಚಿಂತಾಮಣಿಯಲ್ಲಿರುವ ಗ್ರಂಥಾಲಯದ ಕಟ್ಟಡವು ಶಿಥಿಲವಾಗಿದ್ದು ಸ್ಥಳಾವಕಾಶ ತುಂಬಾ ಕಡಿಮೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಆ) *ಹಾಗಿದ್ದಲ್ಲಿ ಬೇರೆ ಕಟ್ಟಡ ಕಟ್ಟಲು ಸರ್ಕಾರ ಕ್ರಮ ತೆಗೆದಕೊಳ್ಳುವುದೇ?*

ಶ್ರೀ ಎಚ್. ವಿಶ್ವನಾಥ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :

ಅ) ಹೌದು.

ಆ) ಹೌದು.

11.30 ಎ.ಎಂ.

ಶ್ರೀ ಚೌಡರೆಡ್ಡಿ : ಮಾನ್ಯ ಅಧ್ಯಕ್ಷರೆ, ತಾವು 1970ರಲ್ಲಿ ಮೇಲ್ಮನೆಯ ಛೇರ್ಮನ್ ಆಗಿದ್ದೀರಿ. ಕೋಲಾರ ಜಿಲ್ಲೆಯ ಸೆಂಟರ್‌ನಲ್ಲಿ ಚಿಂತಾಮಣಿ ಇದೆ ಎಂದು ಹೇಳಿ ಅಲ್ಲಿ ಡಿಸ್ಟ್ರಿಕ್ಟ್ ಸೆಂಟ್ರಲ್ ಲೈಬ್ರರಿ 1970ನೇ ಇಸವಿಯಲ್ಲಿ ಪ್ರಾರಂಭ ಆಗಿತ್ತು. ನನ್ನ ತಂದೆ ದಿವಂಗತ ಎಂ.ಸಿ. ಆಂಜನೇಯ ಅವರು ಎಂ.ಎಲ್.ಎ. ಆಗಿದ್ದರು. ಆಗ ಮಂಡ್ಯ ಜಿಲ್ಲೆಯ ದಿವಂಗತ ಶಂಕರೇಗೌಡರು ಮಾನ್ಯ ವಿದ್ಯಾಮಂತ್ರಿಗಳಾಗಿದ್ದರು, ಆ ಬಗ್ಗೆ ಗವರ್ನಮೆಂಟ್ ಆರ್ಡರ್ ಆಗಿತ್ತು. ಗ್ರಂಥಾಲಯ ಏನೋ ಕೋಲಾರಕ್ಕೆ ಶಿಫ್ಟ್ ಆಯಿತು, ಅದರ ಬಗ್ಗೆ ನಾನು ಮಾತನಾಡುತ್ತಿಲ್ಲ. ಆಗ ಬಿಲ್ಡಿಂಗ್ಸ್ ಎಲ್ಲಾ ಕೊಟ್ಟಿದ್ದರು. ವಿಲೇಜ್ ಆಫೀಸರ್ಸ್ ಎಂದು ಹೇಳಿ ಅವರು ಸ್ಪೋರ್ಟ್ಸ್ ಕಾಂಪ್ಲೆಕ್ಸ್ ಮಾಡಿದ್ದರು, ಅಲ್ಲಿ ಸ್ಪೋರ್ಟ್ಸ್ ಕ್ಲಬ್ ಸಹ ಇತ್ತು. ಅವೆಲ್ಲಾ ಇತ್ತು. ಇಷ್ಟೊಂದು ದೊಡ್ಡ ಜಾಗ ಕೊಟ್ಟು ಇಷ್ಟೆಲ್ಲಾ ಮಾಡಿರುವಾಗ

ಗ್ರಂಥಾಲಯ ಕಟ್ಟಡ ಪಾಳು ಬಿದ್ದು ಈಗ ಲೈಬ್ರರಿ ಬೇರೆ ಕಟ್ಟಡದಲ್ಲಿ ನಡೆಯುತ್ತಿದೆ. ಅದಕ್ಕೋಸ್ಕರ ಒಂದು ಹೊಸ ಕಟ್ಟಡ ಕಟ್ಟಬೇಕು ಎಂಬ ವಿಚಾರದ ಬಗ್ಗೆ ಸರ್ಕಾರದವರು ಹೌದು ಎಂದು ಉತ್ತರದಲ್ಲಿ ಒಪ್ಪಿಕೊಂಡಿದ್ದಾರೆ. ಅವರನ್ನು ನಾನು ಅಭಿನಂದಿಸುತ್ತೇನೆ. ಆದರೆ ಎಷ್ಟು ದುಡ್ಡು ಖರ್ಚಾಗುತ್ತದೆ, ಎಷ್ಟು ದೊಡ್ಡ ಕಟ್ಟಡ ಕಟ್ಟುತ್ತೇವೆ ಎಂದು ಇದರಲ್ಲಿ ನಮೂದಿಸಿಲ್ಲ. ಜೊತೆಗೆ ಈಗ ಚಿಂತಾಮಣಿ ನಗರಸಭೆ ಆಗಿದೆ. ದಯವಿಟ್ಟು ನಮ್ಮ ತಾಲ್ಲೂಕು ಲೈಬ್ರರಿಯನ್ನು ಮೇಲ್ದರ್ಜೆಗೆ ಏರಿಸಬೇಕು ಎಂದು ತಮ್ಮ ಮುಖಾಂತರ ಅವರನ್ನು ಕೇಳಿಕೊಳ್ಳುತ್ತೇನೆ. ಹೊಸ ಕಟ್ಟಡ ಕಟ್ಟಲು ಎಷ್ಟು ದುಡ್ಡು ವೆಚ್ಚ ಮಾಡುತ್ತೀರಿ ಎಂದು ತಿಳಿಸಬೇಕೆಂದು ಮಾನ್ಯ ಸಚಿವರಲ್ಲಿ ಪ್ರಾರ್ಥನೆ ಮಾಡುತ್ತೇನೆ.

ಶ್ರೀ ಎಚ್. ವಿಶ್ವನಾಥ್ : ಮಾನ್ಯ ಅಧ್ಯಕ್ಷರೆ, ಹಿಂದೆ ಇದ್ದಂತಹ ಗ್ರಂಥಾಲಯ ಕಟ್ಟಡ ಶಿಥಿಲಗೊಂಡು ಈಗ ಹಳೆಯ ನಮ್ಮ ತಾಲ್ಲೂಕು ಕಚೇರಿಯ ಕಟ್ಟಡದಲ್ಲಿ ಅದು ನಡೆಯುತ್ತಿದೆ. ಸುಮಾರು 9.5 ಲಕ್ಷ ರೂಪಾಯಿಗಳಲ್ಲಿ ಕಟ್ಟಡ ಕಟ್ಟಲು ಅಂದಾಜು ವೆಚ್ಚ ಮಾಡಿದ್ದೇವೆ. 4 ಲಕ್ಷ ರೂಪಾಯಿಗಳನ್ನು ರಾಜಾರಾಮ್ ಮೋಹನ್‌ರಾಯ್ ಲೈಬ್ರರಿ ಫಂಡ್ ಎಂದು ಬಿಡುಗಡೆ ಮಾಡಿದ್ದೇವೆ. ರಾಜ್ಯದ ಯಾವುದೇ ಭಾಗದಲ್ಲಿ ಕಟ್ಟತಕ್ಕಂಥ ಗ್ರಂಥಾಲಯ ಕಟ್ಟಡಗಳಿಗೆ ನಮ್ಮ ರಾಜಾರಾಮ್ ಮೋಹನ್‌ರಾಯ್ ಲೈಬ್ರರಿ ಸಂಸ್ಥೆಯವರು ಫಂಡ್ಸ್ ಸ್ವಲ್ಪ ಕೊಡುತ್ತಾರೆ, ಉಳಿದುದನ್ನು ನಮ್ಮ ಎಂ.ಪಿ.ಗಳು ಮತ್ತು ಬೇರೆ ಬೇರೆ ರೀತಿಯಲ್ಲಿ ಅದನ್ನು ಕ್ರೋಢೀಕರಣ ಮಾಡಿ ಕಟ್ಟತಕ್ಕದ್ದು ಇದೆ. ನಾವು ನಾಲ್ಕು ಲಕ್ಷ ರೂಪಾಯಿಗಳನ್ನು ಇಟ್ಟಿದ್ದೇವೆ. ಅದಕ್ಕೆ ಎಂ.ಪಿ.ಗಳಿಗೆ ಕಾಗದ ಬರೆದು ತಾವು ಕೂಡ ಪರ್ಸ್ಯೂ ಮಾಡಿದರೆ ಕಟ್ಟಡದ ಕೆಲಸವನ್ನು ಇಮ್ಮೀಡಿಯಟ್ ಆಗಿ ಕೈಗತ್ತಿಕೊಳ್ಳಲಿಕ್ಕೆ ಸಾಧ್ಯ ಆಗುತ್ತದೆ.

ಶ್ರೀ ಚೌಡರೆಡ್ಡಿ : ನಮ್ಮ ತಾಲ್ಲೂಕು ಲೈಬ್ರರಿಯನ್ನು ಮೇಲ್ದರ್ಜೆಗೆ ಏರಿಸಬೇಕು. ನಮ್ಮ ಚಿಂತಾಮಣಿಗೆ ನಗರಸಭೆ ಆಗಿದೆ. ಮೊದಲು ಡಿಸ್ಟ್ರಿಕ್ಟ್ ಸೆಂಟ್ರಲ್ ಲೈಬ್ರರಿ ಇತ್ತು. ಅದನ್ನು ಹಾಳು ಮಾಡಿಕೊಂಡಿದ್ದೇವೆ. ತಾಲ್ಲೂಕು ಲೈಬ್ರರಿಯನ್ನು ಮೇಲ್ದರ್ಜೆಗೆ ಏರಿಸಬೇಕು ಎಂಬ ವಿಚಾರದ ಬಗ್ಗೆ ಸಚಿವರು ಉತ್ತರ ಕೊಡುತ್ತಿಲ್ಲ. ಆಮೇಲೆ ಹೊಸ ಕಟ್ಟಡಕ್ಕೆ 9 ಲಕ್ಷ ರೂಪಾಯಿ ಅಂದಾಜು ವೆಚ್ಚ ಮಾಡಿದ್ದಾರೆ. ಆದರೆ ಈ ಕೆಲಸಕ್ಕೆ ಇನ್ನೂ ಹೆಚ್ಚಿಗೆ ಹಣ ಬೇಕಾಗುತ್ತದೆ. ಅದನ್ನು ಒದಗಿಸುವ ಪ್ರಯತ್ನ ಆಗಬೇಕು.

ಶ್ರೀ ಎಚ್. ವಿಶ್ವನಾಥ್ : ಪ್ರಸ್ತುತ ಇರುವಂತಹ ವ್ಯವಸ್ಥೆಯಲ್ಲಿ ಜಿಲ್ಲಾ ಮಟ್ಟಕ್ಕೆ ಜಿಲ್ಲಾ ಗ್ರಂಥಾಲಯಗಳು ಇದ್ದಾವೆ. ನಗರ ಗ್ರಂಥಾಲಯಗಳು ಇದ್ದಾವೆ. ಚಿಂತಾಮಣಿ ನಗರಸಭೆ ಆಗಿರುವ ಬಗ್ಗೆ ಪರಿಶೀಲನೆ ಮಾಡಿ ಲೈಬ್ರರಿಯನ್ನು ಮೇಲ್ದರ್ಜೆಗೆ ಏರಿಸುವ ಪ್ರಯತ್ನ ಮಾಡುತ್ತೇವೆ ಎಂದು ಹೇಳುತ್ತೇನೆ. ಮತ್ತೆ 9.5 ಲಕ್ಷ ರೂಪಾಯಿಗಳ ಅಂದಾಜು ವೆಚ್ಚದಲ್ಲಿ ಕೂಡ ನಮ್ಮ ಇಲಾಖೆಯಲ್ಲಿ ಹಣಕಾಸಿನ ಕೊರತೆ ಇರುವುದರಿಂದ ತಾವು ಸಮುದಾಯದ ಸಹಯೋಗ ಕೊಟ್ಟರೆ ಒಳ್ಳೆಯದು ಎಂದು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಸಿ. ಬೈರೇಗೌಡ : ಮಾನ್ಯ ಅಧ್ಯಕ್ಷರೆ, ಗ್ರಾಮೀಣ ಪ್ರದೇಶ ಮತ್ತು ಜಿಲ್ಲಾ ಕೇಂದ್ರಗಳಲ್ಲಿ ಈ ರೀತಿಯಾದಂತಹ ಕಟ್ಟಡಗಳನ್ನು ಕಟ್ಟಿದರೆ ಸಮುದಾಯದಿಂದ ವಂತಿಕೆ ನೀಡತಕ್ಕದ್ದು ಸೂಕ್ತ ಎಂದು

ಹೇಳುತ್ತಾರೆ. ಬೆಂಗಳೂರಿನಲ್ಲಿಯೇ ಅನೇಕ ಕಟ್ಟಡಗಳನ್ನು ಕಟ್ಟಿಸಿದ್ದೀರಿ. ಬೆಂಗಳೂರು ಸೆಂಟ್ರಲ್ ಲೈಬ್ರರಿ ಸಹ ಇದೆ. ಇದಕ್ಕೆ ಬೆಂಗಳೂರಿನ ಯಾವ ಸಮುದಾಯದವರು ಹಣ ಕೊಟ್ಟು ಕಟ್ಟಿರತಕ್ಕಂತಹ ವ್ಯವಸ್ಥೆ ಆಗಿದೆ. ಬೆಂಗಳೂರಿನಲ್ಲಿ ಮಾತ್ರ ನೀವು ಯಾರದ್ದೂ ವಂತಿಕೆ ಕೇಳುವುದಿಲ್ಲ. ಯಾವ ಪಾರ್ಲಿಮೆಂಟ್ ಸದಸ್ಯರಿಗೂ ಹಣ ಕೊಡಿ ಎಂದು ಕೇಳುವುದಿಲ್ಲ. ಆದರೆ ಇಲ್ಲಿ ಗ್ರಾಮೀಣ ಪ್ರದೇಶದಲ್ಲಿ ಕಟ್ಟುವುದಕ್ಕೆ ಮಾತ್ರ ಏಕೆ ಭಿಕ್ಷೆ ಬೇಡಿ, ಭಿಕ್ಷೆ ಬೇಡಿ ಎಂದು ಹೇಳುತ್ತಿರುತ್ತೀರಿ? ಇದರಲ್ಲಿ ಸರ್ಕಾರದ ಜವಾಬ್ದಾರಿ ಇದೆ. ಲೈಬ್ರರಿ ಮೂವ್‌ಮೆಂಟನ್ನು ಬೆಳೆಸಬೇಕಾಗಿರತಕ್ಕಂತಹ ಅವಶ್ಯಕತೆ ಇದೆ. ಇದರಿಂದ ಈ ರೀತಿಯಾಗಿ ಭಿಕ್ಷಾಟನೆ ಮಾಡಿ ಇಂತಹ ಕಟ್ಟಡಗಳನ್ನು ಕಟ್ಟುವುದಕ್ಕೆ ಮುಂದಾಗಬೇಡಿ. ಸರ್ಕಾರದಿಂದ ಒಂದು ನಿರ್ದಿಷ್ಟವಾದಂತಹ ಕಾರ್ಯಕ್ರಮಗಳನ್ನು ಹಾಕಿ, ಈ ಕಟ್ಟಡಗಳನ್ನು ಕಟ್ಟಿಸತಕ್ಕದ್ದು ಬಹಳ ಸೂಕ್ತ ಇದೆ. ಇದೇ ರೀತಿಯಲ್ಲಿ ಚಿಕ್ಕಬಳ್ಳಾಪುರದಲ್ಲಿ ಒಂದು ಚರಿತ್ರಾರ್ಹವಾದಂತಹ ಲೈಬ್ರರಿ ಕಟ್ಟಡ ಇದೆ. ಅಲ್ಲಿಗೆ ನೆಹರೂ ಅವರು ಬಂದಿದ್ದರು, ಮಹಾತ್ಮಾ ಗಾಂಧೀಜಿ ಅವರು ಬಂದು ಹೋಗಿರತಕ್ಕದ್ದು ಇದೆ. ಇವತ್ತು ನಾಯಿ, ನರಿಗಳು ಕೂಡ ಅಲ್ಲಿ ಓಡಾಡುವುದಕ್ಕೆ ಇಷ್ಟಪಡುವುದಿಲ್ಲ. ಆ ಪರಿಸ್ಥಿತಿ ಅಲ್ಲಿದೆ. ಅದನ್ನೆಲ್ಲಾ ನೋಡಿ ನಾನು ಈ ಮಾತನ್ನು ಹೇಳುತ್ತಿದ್ದೇನೆ. ಇದಕ್ಕೆ ಕೊಸರಾಟ ಮಾಡುವುದಕ್ಕೆ ಹೋಗಬೇಡಿ. ಸರ್ಕಾರದಿಂದಲೇ ಹಣ ಕೊಟ್ಟು ಇದನ್ನು ಕಟ್ಟಿಸುತ್ತೇನೆ ಎನ್ನತಕ್ಕ ಜವಾಬ್ದಾರಿ ತೆಗೆದುಕೊಳ್ಳಿ. ತಾವು ಆ ಒಂದು ಆಶ್ವಾಸನೆಯನ್ನು ಕೊಡಬೇಕು ಎನ್ನತಕ್ಕಂತಹ ಮನವಿಯನ್ನು ನಾನು ಮಾಡುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಎಚ್. ವಿಶ್ವನಾಥ್ : ಸನ್ಮಾನ್ಯ ಅಧ್ಯಕ್ಷರೆ, ಸಮುದಾಯದ ಭಾಗವಹಿಸುವಿಕೆಯನ್ನು ಮಾನ್ಯ ಸದಸ್ಯರು ಭಿಕ್ಷಾಟನೆ ಎಂದು ಹೇಳುತ್ತಿದ್ದಾರೆ. ಹೌದು, ಬೆಂಗಳೂರು ನಗರದಲ್ಲಿ ನಾವು ಕಟ್ಟಿಸಿದ್ದೇವೆ. ಇವತ್ತು ಬೆಂಗಳೂರು ನಗರಪಾಲಿಕೆಯ ಮಹಾಪೌರರೇ ನಮ್ಮ ಬೆಂಗಳೂರು ಮಹಾನಗರದ ಗ್ರಂಥಾಲಯಕ್ಕೆ ಅಧ್ಯಕ್ಷರಿದ್ದಾರೆ. ಅವರು ಕಾರ್ಪೊರೇಷನ್‌ನ್ನಿಂದ ಸಹ ಸ್ವಲ್ಪ ಹಣವನ್ನು ಕೊಡಿಸಿದ್ದಾರೆ ತಾವು ನಗರಸಭೆ ಆಗಿದೆ ಎಂದು ಹೇಳುತ್ತೀರಿ. ನಗರಸಭೆಯಿಂದ ಸಹ ಇದಕ್ಕೆ ಸ್ವಲ್ಪ ಹಣವನ್ನು ಕೊಟ್ಟು ಈ ಕಾರ್ಯವನ್ನು ಮಾಡಬೇಕು ಎಂದು ನನ್ನ ವಿನಂತಿ. 100ಕ್ಕೆ 100 ನಾವೇ ಮಾಡುವುದು ಕಷ್ಟ. ನಾನು ಹೇಳಿ ಬಿಡಬಹುದು, 100ಕ್ಕೆ 100 ಕೊಡುತ್ತೇವೆ ಎಂದು. ಆದರೆ ಹಣದ ಕೊರತೆ, ಲಭ್ಯತೆ ಬಗ್ಗೆ ನಾನು ವಿನಂತಿ ಮಾಡುತ್ತಿದ್ದೇನೆಯೇ ಹೊರತು ಅದನ್ನು ತಾವು ಭಿಕ್ಷಾಟನೆ ಎನ್ನತಕ್ಕ ಮಾತಿನ ಪ್ರಯೋಗ ಮಾಡಿದ್ದೀರಿ. ಇವರಲ್ಲಿ ಸಮುದಾಯದ ಭಾಗವಹಿಸುವಿಕೆ ಆಗಬೇಕು. ಹೌದು, ನಾವು ಇವತ್ತು ಶಾಲಾ ಕಟ್ಟಡಗಳನ್ನು ದತ್ತು ತೆಗೆದುಕೊಳ್ಳಬೇಕು ಎನ್ನುವ ಮಾತನ್ನು ಕೇಳುತ್ತಿದ್ದೇವೆ. ಅದನ್ನು ಭಿಕ್ಷಾಟನೆ ಎಂದರೆ ಹೇಗೆ? ಸಮುದಾಯದ ಭಾಗವಹಿಸುವಿಕೆಯಲ್ಲಿ ಅದನ್ನು ಮಾಡುತ್ತೇವೆ ಎನ್ನತಕ್ಕ ಮಾತನ್ನು ಹೇಳಿದೆ.

ಶ್ರೀ ಸಿ. ಭೈರೇಗೌಡ : ಸರ್ಕಾರದಿಂದ ಲೈಬ್ರರಿ ಸೆಸ್ ಅನ್ನು ವಸೂಲಿ ಮಾಡುತ್ತಿದ್ದಾರೆ. ಪ್ರತಿ ಒಂದಕ್ಕೂ ಕೂಡ ಲೈಬ್ರರಿ ಸೆಸ್ ಇದೆ. ಈ ಹಣದಲ್ಲಿ ಕಟ್ಟಡದ ಈ ವ್ಯವಸ್ಥೆ ಮಾಡಿಸಿ. ಒಂದು ನಿರ್ದಿಷ್ಟವಾದಂತಹ ಕಾರ್ಯಕ್ರಮ ಹಾಕಿ. ಆ ಹಣದಿಂದಾದರೂ ಕಟ್ಟಡವನ್ನು ಕಟ್ಟಿಸುವುದಕ್ಕೆ ವ್ಯವಸ್ಥೆ ಮಾಡಿಸಿ.

ಶ್ರೀ ಎಚ್. ವಿಶ್ವನಾಥ್: ಲೈಬ್ರರಿ ಸೆಸ್ ಅನ್ನು ವಸೂಲಿ ಮಾಡುತ್ತಿದ್ದೇವೆ. ಆದರೆ ನಗರಸಭೆ, ಪುರಸಭೆಗಳಲ್ಲಿ ಕೂಡ ಬಾಕಿ ಇದ್ದಾವೆ. ನಾವು ವಸೂಲಿ ಮಾಡುತ್ತಿದ್ದೇವೆ. ಅದಕ್ಕೇ ನಾನು ಹೇಳುವುದು,

ಯಾವುದೇ ಕಾರ್ಯಕ್ರಮ ಸಮರ್ಥವಾಗಿ ಅನುಷ್ಠಾನಕ್ಕೆ ಬರಬೇಕು ಎಂದರೆ ತಾವು ಸೇರಿದ ಹಾಗೆ ಜನ ಪ್ರತಿನಿಧಿಗಳು ಸಮುದಾಯಕ್ಕೆ ಸೇರಿದ ಹಾಗೆ ಆಗಬೇಕು ಎನ್ನತಕ್ಕ ವಿನಂತಿ ಮಾಡುತ್ತಿದ್ದೇನೆ.

ಶ್ರೀ ಕೆ.ಬಿ. ಮಲ್ಲಿಕಾರ್ಜುನ : ಮಾನ್ಯ ಅಧ್ಯಕ್ಷರೆ, ಈ ರಾಜಾರಾಮ್ ಮೋಹನರಾಯ್ ಗ್ರಂಥಾಲಯ ನಿಧಿಯಿಂದ ಗ್ರಾಮೀಣ ಪ್ರದೇಶದಲ್ಲಿ ಲೈಬ್ರರಿ ಕಟ್ಟಡ ಕಟ್ಟಲಿಕ್ಕೆ ಐಟಂ ಕೊಡಬೇಕು ಮತ್ತು 75 ಭಾಗ ಹಣವನ್ನು ಭರಿಸಬೇಕು ಎಂದು ಸುತ್ತೋಲೆ ಕೊಟ್ಟು ಉಳಿದಿರತಕ್ಕಂತಹ 75 ಸಾವಿರ ರೂಪಾಯಿಗಳನ್ನು ಗ್ರಾಮ ಪಂಚಾಯತಿಯವರು ಭರಿಸಬೇಕು ಎನ್ನತಕ್ಕ ಆದೇಶ ಕೊಟ್ಟಿದ್ದಾರೆ. ಆ ಪ್ರಕಾರ ನಾವೆಲ್ಲ ಸರ್ಕಾರಕ್ಕೆ ವರದಿಯನ್ನು ಕಳಿಸಿ ಕೊಟ್ಟಿದ್ದೇವೆ. ಗ್ರಾಮ ಪಂಚಾಯತಿಯ ಸ್ಥಿತಿಗಳು ಇವತ್ತು ತಮಗೆ ಗೊತ್ತಿದೆ. ಗ್ರಾಮ ಪಂಚಾಯತಿಗಳು 75 ಸಾವಿರ ಕಟ್ಟದೇ ಇರತಕ್ಕಂತಹ ಸ್ಥಿತಿ ಇವತ್ತು ಇದೆ. ನಾನು ಮನವಿ ಮಾಡಿಕೊಳ್ಳುವುದೇನೆಂದರೆ, ಮಾನ್ಯ ಬೈರೇಗೌಡರು ಹೇಳಿದ ರೀತಿಯಲ್ಲಿ ಲೈಬ್ರರಿ ಸೆಸ್‌ನಿಂದ ಹಣವನ್ನು ಕೊಡಬೇಕಾಗುತ್ತದೆ. ನಗರ ಪ್ರದೇಶದಲ್ಲಿ ಯಾರೋ ವಂತಿಕೆ ಕೊಡತಕ್ಕದ್ದು ಇರಬಹುದು. ಆದರೆ ಗ್ರಾಮೀಣ ಪ್ರದೇಶದಲ್ಲಿ ವಂತಿಕೆ ಕೊಡತಕ್ಕವರು ಸಿಗುವುದಿಲ್ಲ. ಹಾಗಾಗಿ ಏನಾಗಿದೆ? ಹಿಂದೆ ಒಂದು ಶಾಲಾ ಕಟ್ಟಡದ ಸ್ಕೀಮ್ ಇದೇ ಇಲಾಖೆಯಲ್ಲಿ ಬಂದಿತ್ತು. ಈಗ ನಮ್ಮ ಜಿಲ್ಲೆಯಲ್ಲಿ ಅರ್ಧ ಕಟ್ಟಡ ಕಟ್ಟಿ ಸಾರ್ವಜನಿಕ ವಂತಿಕೆಯನ್ನು ನಿಲ್ಲಿಸಿರತಕ್ಕ ವಾತಾವರಣ ಇದೆ. ಅದೇ ರೀತಿ ಈ ಕಟ್ಟಡಗಳಿಗೂ ಆಗಬಾರದು ಎನ್ನತಕ್ಕ ದೃಷ್ಟಿಯಿಂದ 75 ಸಾವಿರ ಗ್ರಾಮೀಣ ಪ್ರದೇಶದಲ್ಲಿ ಕಟ್ಟತಕ್ಕಂಥ ಗ್ರಂಥಾಲಯಗಳಿಗೆ ದಯಮಾಡಿ ಸರ್ಕಾರದಿಂದ ಹಣವನ್ನು ಕೊಡಬೇಕು ಎಂದು ಮನವಿ ಮಾಡುತ್ತೇನೆ.

ಶ್ರೀ ಎಚ್. ವಿಶ್ವನಾಥ್ : ಪ್ರತಿ ಗ್ರಾಮ ಪಂಚಾಯತಿ ಕೇಂದ್ರಗಳಿಗೆ ಎರಡು ಲಕ್ಷ ರೂಪಾಯಿಗಳನ್ನು ಕೊಡುತ್ತಿದ್ದೇವೆ. ಮತ್ತೆ ಗ್ರಾಮ ಪಂಚಾಯತಿಯವರು ನಿವೇಶನ ಕೂಡ ಕೊಡಬೇಕಾಗುತ್ತದೆ. ಎರಡು ಲಕ್ಷ ರೂಪಾಯಿಗಳಿಗೂ ಮೀರಿ ಇನ್ನೂ ಚೆನ್ನಾಗಿ ಕಟ್ಟಬೇಕು ಎಂದರೆ ಅವರು ಗ್ರಾಮ ಪಂಚಾಯತಿಯ ಆರ್ಥಿಕ ಹಿನ್ನೆಲೆಯ ಮೇಲೆ ಇನ್ನೂ ದೊಡ್ಡದಾಗಿ ಕಟ್ಟಿಕೊಳ್ಳಬಹುದು. ನಾವು ಕೊಡವಂತಹದು, ನಮ್ಮ ಲಭ್ಯತೆಯಲ್ಲಿ ಎರಡು ಲಕ್ಷ ರೂಪಾಯಿಗಳನ್ನು ಕೊಡುತ್ತಿದ್ದೇವೆ.

ಶ್ರೀ ಕೆ.ಬಿ. ಮಲ್ಲಿಕಾರ್ಜುನ : 75 ಸಾವಿರ ರೂಪಾಯಿಗಳನ್ನು ಗ್ರಾಮ ಪಂಚಾಯತಿಯವರು ಭರಿಸಲೇಬೇಕು ಎನ್ನತಕ್ಕ ಆದೇಶ ಇದೆ.

ಶ್ರೀ ಎಚ್. ವಿಶ್ವನಾಥ್ : ಮಾನ್ಯ ಅಧ್ಯಕ್ಷರೆ, ನಾನು ಮಾನ್ಯ ಮಲ್ಲಿಕಾರ್ಜುನ್ ಅವರಲ್ಲಿ ವಿನಂತಿ ಮಾಡುತ್ತಿದ್ದೇನೆ. ಸರ್ಕಾರದ ಸಹಯೋಗ ಸಮುದಾಯದ ಜೊತೆಗೆ ಆಗಲೇಬೇಕು ಎಂದು ಇಚ್ಛೆ ಇದೆ. ಸ್ಥಳೀಯ ಸಂಸ್ಥೆಗಳು ಇದರಲ್ಲಿ ಪಾರ್ಟಿಸಿಪೇಟ್ ಮಾಡಲೇಬೇಕು ಎನ್ನತಕ್ಕದ್ದು. ಯಾವುದೇ ಕಾರ್ಯಕ್ರಮಕ್ಕೆ ಕೂಡ 100ಕ್ಕೆ 100ರಷ್ಟು ಸರ್ಕಾರವೇ ಭರಿಸತಕ್ಕದ್ದರಲ್ಲಿ ನಾವು ಕೆಲವು ವಿಫಲತೆಗಳನ್ನು ಕೂಡ ನೋಡುತ್ತಿದ್ದೇವೆ. ನಾನು ನೇರವಾಗಿ ಈ ಮಾತನ್ನು ಕೂಡ ಹೇಳುತ್ತೇನೆ. ಏಕೆಂದರೆ, ಹೌದು ಎಲ್ಲದಕ್ಕೂ ಒಪ್ಪಿಗೆ ಆಗಬೇಕು ಎನ್ನತಕ್ಕದ್ದು. ನಾವು ಜನಪ್ರತಿನಿಧಿಗಳು ನಮ್ಮ ನಮ್ಮ ವ್ಯಾಪ್ತಿಯಲ್ಲಿ ಬರತಕ್ಕಂತಹ ಇಂತಹ ಸಾರ್ವತ್ರಿಕ ಕೆಲಸಗಳಿಗೆ, ಸಾರ್ವಜನಿಕ ಗ್ರಂಥಾಲಯ ಇರಬಹುದು, ಸಾರ್ವಜನಿಕ

ಶಿಕ್ಷಣ ಇರಬಹುದು, ಇದಕ್ಕೆ ಸಮುದಾಯದ ಸಹಭಾಗಿತ್ವ ಖಂಡಿತ ಆಗಲೇಬೇಕು ಎನ್ನತಕ್ಕದ್ದನ್ನು ಒತ್ತಾಯ ಪೂರ್ವಕವಾಗಿ ಕೂಡ ನನ್ನ ಎಲ್ಲಾ ಚುನಾಯಿತ ಪ್ರತಿನಿಧಿಗಳು ಮತ್ತು ಜನತಂತ್ರ ವ್ಯವಸ್ಥೆಯಲ್ಲಿ ಪಾಲುದಾರರಾಗಿರುವ ತಮ್ಮಲ್ಲಿ ಕೂಡ ವಿನಂತಿ ಮಾಡುತ್ತೇನೆ.

ಅಧ್ಯಕ್ಷರು : ಮಾನ್ಯ ಪೂಜಾರಿಯವರೇ, ನಿಮ್ಮ ಪ್ರಶ್ನೆಗೆ ಇನ್ನೂ ಉತ್ತರ ಬಂದಿಲ್ಲ. ಜೊತೆಗೆ ಮಾನ್ಯ ಆರೋಗ್ಯ ಸಚಿವರ ಹೆಸರಿನಲ್ಲಿ ಎರಡು ಮೂರು ಪ್ರಶ್ನೆಗಳು ಇವೆ. ಅವರ ವಿಚಾರ ತಮಗೆಲ್ಲಾ ಬಹುಶಃ ಗೊತ್ತಿರಬಹುದು. ಹೋದ ಸಲ ಅವರ ಮಗ ಆಕ್ಸಿಡೆಂಟ್‌ನಲ್ಲಿ ತೀರಿ ಹೋಗಿದ್ದಾರೆ. ಮಾನ್ಯ ಗೋಪಾಲ್ ಪೂಜಾರಿಯವರದ್ದು ಮುಂದೆ ತೆಗೆದುಕೊಳ್ಳೋಣ. ಅವರದ್ದು ಉತ್ತರ ಬಂದಿಲ್ಲ. ಆದಾದ ಮೇಲೆ ಶ್ರೀ ಪುಟ್ಟರಂಗನಾಥ್, ಶ್ರೀ ರಾಮಲಿಂಗಾರೆಡ್ಡಿ, ಶ್ರೀ ಯೋಗೀಶ್ ಭಟ್ ಇವರದ್ದು ಆಮೇಲೆ ತೆಗೆದುಕೊಳ್ಳೋಣ. ಮಾನ್ಯ ಮಲಕರೆಡ್ಡಿಯವರ ಮಗ ಕಾರು ಅಪಘಾತದಲ್ಲಿ ತೀರಿ ಹೋದರು. ಇವತ್ತು ಅವರದ್ದು ಹತ್ತನೇ ದಿನ ಎಂದು ಅವರು ಹೋಗಿದ್ದಾರೆ. ಅವರು ರಿಕ್ವೆಸ್ಟ್ ಮಾಡಿಕೊಂಡಿದ್ದಾರೆ. ನಾವು ಈ ಪ್ರಶ್ನೆಗಳನ್ನು ಮುಂದೆ ತೆಗೆದುಕೊಳ್ಳೋಣ, ಬೇರೆ ಏನೂ ಇಲ್ಲ.

ಶ್ರೀ ಎಸ್.ಎಚ್. ಪುಟ್ಟರಂಗನಾಥ್ : ನನ್ನ ಪ್ರಶ್ನೆ ಬಗ್ಗೆ ಹೋದ ಸಾರಿ ಹಾಗೆಯೇ ಹೇಳಿದ್ದರು.

ಅಧ್ಯಕ್ಷರು : ಖಂಡಿತವಾಗಿ ನಿಮ್ಮ ಪ್ರಶ್ನೆ ತೆಗೆದುಕೊಳ್ಳುತ್ತೇವೆ. ಈಗ ಪ್ರಶ್ನೆಗಳ ಪಟ್ಟಿಯಲ್ಲಿ ಹಾಕಿದ್ದೇವಲ್ಲ. ನಿಮ್ಮ ಪ್ರಶ್ನೆಯನ್ನು ತೆಗೆದುಕೊಳ್ಳಲಿಲ್ಲ ಎಂದು ಏಕೆ ಹೇಳುತ್ತೀರಿ? ಮಾನ್ಯ ಆರೋಗ್ಯ ಮಂತ್ರಿಗಳ ಪರಿಸ್ಥಿತಿ ಈ ರೀತಿ ಇರುವುದರಿಂದ ಇವತ್ತು ತೆಗೆದುಕೊಳ್ಳುತ್ತಿಲ್ಲ. ಮುಂದಿನ ಬುಧವಾರ ಪ್ರಶ್ನೆ ಪಟ್ಟಿ ಇದೆಯಲ್ಲ ಅಂದು ಪುನಃ ತೆಗೆದುಕೊಳ್ಳುತ್ತೇನೆ. ಆ ನಂತರ ಮಾನ್ಯ ಪ್ರಭಾಕರ್ ಬಂಗೇರ ಅವರ ಪ್ರಶ್ನೆಗೆ ಉತ್ತರ ಬಂದಿಲ್ಲ. ಮಾನ್ಯ ಸದಾನಂದಗೌಡರು ಕೇಳಿದಂತಹ ಪ್ರಶ್ನೆಗೆ ಉತ್ತರ ಬಂದಿದೆ. ಅದನ್ನು ಅಮೇಲೆ ತೆಗೆದುಕೊಳ್ಳೋಣ.

ಶಿಕ್ಷಣ ಇಲಾಖೆಯಲ್ಲಿ ಕಂಪ್ಯೂಟರೀಕರಣ

533 - ಶ್ರೀ ಸಭಾಪತಿ. ಯು.ಆರ್. (ಉಡುಪಿ) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯ ಸರ್ಕಾರದ ಶಿಕ್ಷಣ ಇಲಾಖಾ ಕಾರ್ಯದರ್ಶಿಗಳ ಕಛೇರಿ ಮತ್ತು ರಾಜ್ಯದ ಜಿಲ್ಲಾವಾರು ವಿದ್ಯಾಂಗ ಉಪನಿರ್ದೇಶಕರ ಕಛೇರಿಗಳ ಕಂಪ್ಯೂಟರೀಕರಣಗೊಳಿಸಿದ ಬಗ್ಗೆ ಮಾಹಿತಿಗಳನ್ನು ನೀಡುವುದು? (ಜಿಲ್ಲಾವಾರು ಮಾಹಿತಿ ನೀಡಿರಿ)

ಆ) ಶಿಕ್ಷಣ ಇಲಾಖೆಯನ್ನು ಗಣಕೀಕರಣ ಮಾಡುವಲ್ಲಿ ಸರ್ಕಾರಕ್ಕೆ ಇರುವ ಸಮಸ್ಯೆಗಳೇನು? ವಿವರ ನೀಡುವುದು?

ಶ್ರೀ ಎಚ್. ವಿಶ್ವನಾಥ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :

ಅ) 1999-2000ನೇ ಸಾಲಿನಲ್ಲಿ ಸರ್ಕಾರದ ಶಿಕ್ಷಣ ಇಲಾಖಾ ಕಾರ್ಯದರ್ಶಿಗಳ ಕಛೇರಿಯ